# 9.ಪ್ರೌಢ ಹುಳು ಸಾಕಾಣಿಕೆ

ಎರಡನೇ ಜ್ವರದ ನಂತರದಿಂದ ಹಣ್ಣಾಗುವವರೆಗಿನ ಹುಳು ಸಾಕಾಣಿಕೆಯನ್ನು ಪ್ರೌಢ ಹುಳು ಸಾಕಣೆ ಎಂದು ಕರೆಯಲಾಗುತ್ತದೆ. ಈ ಅವಧಿಯು ಸುಮಾರು 15-17 ದಿನಗಳಲ್ಲಿ ಪೂರ್ಣಗೊಳ್ಳುತ್ತದೆ. ಈ ಹಂತದಲ್ಲಿ ಒಟ್ಟು ಆಹಾರದ ಶೇ.94ರಷ್ಟನ್ನು ತಿನ್ನುತ್ತವೆ. ಉಷ್ಣಾಂಶ, ತೇವಾಂಶದ ಅವಶ್ಯಕತೆ ಚಾಕಿ ಹುಳುಗಳಿಗಿಂತ ಕಡಿಮೆ ಇರುತ್ತದೆ. ಇಲ್ಲಿ ನೀಡಿರುವ ವಿವರಣೆ ರಂಬೆ ಪದ್ಧತಿಯಿಂದ ಹುಳು ಸಾಕಾಣಿಕೆಗೆ ಅನ್ವಯಿಸುತ್ತದೆ.

## ಸಾಕಾಣಿಕಾ ಮನೆ:

- ಸಾಕಷ್ಟು ಸ್ಥಳಾವಕಾಶ ಇರುವ, ಉತ್ತಮ ಗಾಳಿ ಸಂಚಾರ ಮತ್ತು ಬೆಳಕಿನಿಂದ ಕೂಡಿರುವ ಪ್ರತ್ಯೇಕ ಹುಳು ಸಾಕಣೆ ಮನೆ ಅವಶ್ಯಕ.
- ಮನೆ ವಿಸ್ತೀರ್ಣ ಅಗತ್ಯಕ್ಕೆ ತಕ್ಕಂತೆ ಇದ್ದು ಎತ್ತರವು ಸುಮಾರು 12 ಅಡಿ ಇರಬೇಕು.
- ಪರಿಣಾಮಕಾರಿ ಸೋಂಕು ನಿವಾರಣೆಗೆ, ಶುಚಿತ್ವ ನಿರ್ವಹಣೆಗೆ, ಉಷ್ಣಾಂಶ ಮತ್ತು ತೇವಾಂಶ ನಿರ್ವಹಣೆಗೆ ಸೂಕ್ತವಾಗಿರಬೇಕು.
- ಪ್ರತ್ಯೇಕ ಸೊಪ್ಪು ಸಂಗ್ರಹಣಾ ಕೊಠಡಿ ಮತ್ತು ಉಪ ಕೊಠಡಿ ಒಳಗೊಂಡಿರಬೇಕು.
- 300 ಮೊಟ್ಟೆ ಸಾಕಾಣಿಕೆಗೆ 50'x20' ಅಡಿ ಅಳತೆಯ ಮನೆ ಸೂಕ್ತ.

## ಸಾಕಾಣಿಕಾ ಮನೆಯ ವಾತಾವರಣ:

- ಹುಳು ಸಾಕಣೆಯ ಯಶಸ್ಸಿಗೆ ಸೂಕ್ತ ವಾತಾವರಣದ ನಿರ್ವಹಣೆ ಬಹಳ ಮುಖ್ಯ.
- ವಿವಿಧ ಹಂತಗಳಲ್ಲಿ ಅವಶ್ಯಕವಿರುವ ಉಷ್ಣಾಂಶ, ಶೈತ್ಯಾಂಶ ಈ ಕೆಳಗಿನಂತೆ ಇರಬೇಕು.
- ಉಷ್ಣಾಂಶ ಹೆಚ್ಚಿಸಲು ವಿದ್ಯುತ್ ಹೀಟರ್ ಅಥವಾ ಹೊಗೆಯಾಡದ ಇದ್ದಿಲು ಕೆಂಡದ ಒಲೆಗಳನ್ನು ಬಳಸುವುದು.
- ಉಷ್ಣಾಂಶ ಕಡಿಮೆ ಮಾಡಲು ನೀರು ಚಿಮುಕಿಸುವುದು, ಹನಿ ಛಾವಣಿ ನಿರ್ಮಾಣ, ಛಾವಣಿ ಮೇಲೆ ಹುಲ್ಲು ಹಾಸುವುದು ಮುಂತಾದ ಕ್ರಮಗಳನ್ನು ಅನುಸರಿಸುವುದು.
- ತೇವಾಂಶ ನಿರ್ವಹಣೆಗೆ ಸ್ವಚ್ಛ, ರೋಗಾಣು ರಹಿತ, ಒದ್ದೆ ಮಾಡಿದ ಸ್ಪಾಂಜ್, ಹ್ಯುಮಿಡಿಫೈಯರ್ ಬಳಸಬೇಕು.

| ಹಂತ | ಉಷ್ಣಾಂಶ ($^0$ಸೆಂ.) | ಶೈತ್ಯಾಂಶ (ಶೇಕಡ) |
|---|---|---|
| 3 | 25-26 | 75 |
| 4 | 24-25 | 70 |
| 5 | 23-24 | 65 |

## ಹಾಸಿಗೆ ಸ್ಥಳಾವಕಾಶ:

- ಹುಳುಗಳು ಒತ್ತಾಗಿದ್ದರೆ, ಗಾಳಿ ಸಂಚಾರ ಕಡಿಮೆಯಾಗಿ ಹಾಸಿಗೆಯಲ್ಲಿ ವಿಷ ಅನಿಲಗಳು ಶೇಖರಣೆಯಾಗಿ ಹುಳುಗಳಿಗೆ ಹಾನಿ ಮಾಡುತ್ತದೆ.
- ಪ್ರೌಢ ಹುಳುಗಳಿಗೆ ಉತ್ತಮ ಗಾಳಿ ಸಂಚಾರ ಅವಶ್ಯಕವಾದ್ದರಿಂದ ಕಿಟಕಿಗಳನ್ನು ತೆರೆದಿರಬೇಕು.
- ಹುಳುಗಳು ದಟ್ಟವಾಗಿದ್ದರೆ, ಸೊಪ್ಪಿನ ಕೊರತೆ ಉಂಟಾಗಿ ಬೆಳವಣಿಗೆ ಕುಂಠಿತವಾಗುತ್ತದೆ.

| ಹಂತ | ಚದರ ಅಡಿ |
|---|---|
| 3 | 210 |
| 4 | 500 |
| 5 | 1200 |

- ರೆಂಬೆ ಪದ್ಧತಿಯಲ್ಲಿ ಹುಳು ಸಾಕಾಣಿಕೆಗೆ ಅವಶ್ಯವಿರುವ ಸ್ಥಳಾವಕಾಶ (50,000 ದ್ವಿತಳಿ ಹುಳುಗಳಿಗೆ) ಇಲ್ಲಿ ಕೊಡಲಾಗಿದೆ.
- 5ನೇ ಹಂತದ ಕೊನೆಯಲ್ಲಿ ಒಂದು ಚದರ ಅಡಿಗೆ 60-65 ಹುಳುಗಳಿರುವಂತೆ ಸ್ಥಳಾವಕಾಶ ಒದಗಿಸುವುದು ಸೂಕ್ತ.

## ಸೊಪ್ಪಿನ ಗುಣಮಟ್ಟ, ಸಂಗ್ರಹಣೆ ಮತ್ತು ಸೊಪ್ಪು ನೀಡುವಿಕೆ:

- ಹಿಪ್ಪುನೇರಳೆ ಸೊಪ್ಪಿನ ಗುಣಮಟ್ಟವು ರೇಷ್ಮೆ ಹುಳು ಸಾಕಣೆಯ ಯಶಸ್ಸಿಗೆ ಮತ್ತೊಂದು ಮುಖ್ಯ ಕಾರಣ.
- ಪ್ರೌಢ ಹುಳುಗಳಿಗೆ ಕಡಿಮೆ ನೀರಿನಂಶವುಳ್ಳ ಸೊಪ್ಪು ಬೇಕಾಗುತ್ತದೆ.
- ಸೊಪ್ಪನ್ನು ತಂಪು ವೇಳೆಯಲ್ಲಿ ಕಟಾವು ಮಾಡಿ ತಂದು, ಸಾಕಣೆ ಮನೆಯಲ್ಲಿ ಸೂಕ್ತ ರೀತಿಯಲ್ಲಿ ಸಂಗ್ರಹಣೆ ಮಾಡಬೇಕು.
- ಸೊಪ್ಪನ್ನು ಹಾಸಿಗೆಯಲ್ಲಿ ಸಮವಾಗಿ ಹರಡುವುದು.
- ಪ್ರತಿ ಬಾರಿ ಸೊಪ್ಪು ನೀಡುವ ಮೊದಲು ಅಸಮಾನ ಮತ್ತು ರೋಗಗ್ರಸ್ಥ ಹುಳುಗಳೇನಾದರೂ ಇದ್ದರೆ ಆಯ್ದು ನಾಶಪಡಿಸಬೇಕು.
- ದಿನಕ್ಕೆ 3 ಬಾರಿ ಸೊಪ್ಪು ಕೊಡುವುದು ಸೂಕ್ತ.

## ಹಾಸಿಗೆ ಸ್ವಚ್ಛತೆ:

- 4 ಮತ್ತು 5 ನೇ ಹಂತಗಳಲ್ಲಿ ಒಂದು ಬಾರಿ ಹಗ್ಗ/ನೈಲಾನ್ ಬಲೆ ಉಪಯೋಗಿಸಿ ಹಾಸಿಗೆ ಬದಲಿಸಬೇಕು.
- ಹಗ್ಗ/ನೈಲಾನ್ ಬಲೆ ಹಾಸಿಗೆಯ ಮೇಲೆ ಹಾಕಿ 2 ಸೊಪ್ಪು ಕೊಟ್ಟ ನಂತರ ಹಾಸಿಗೆಯನ್ನು ಸ್ವಚ್ಛ ಮಾಡಬೇಕು.

## ಜ್ವರದಲ್ಲಿ ಅನುಸರಿಸಬೇಕಾದ ಕ್ರಮಗಳು ಹಾಗೂ ಬೆಳೆ ಸಂರಕ್ಷಣೆ;

- ಹುಳುಗಳು ಜ್ವರದಲ್ಲಿರುವಾಗ ಒಣ ವಾತಾವರಣವಿದ್ದು ಸಾಕಣೆ ಮನೆಯಲ್ಲಿ ಗಾಳಿ ಸಂಚಾರಕ್ಕೆ ಅವಕಾಶ ನೀಡಬೇಕು.
- ಶೇ.90-95ರಷ್ಟು ಹುಳುಗಳು ಜ್ವರಕ್ಕೆ ಹೋದಾಗ ಸೊಪ್ಪು ನೀಡುವುದನ್ನು ನಿಲ್ಲಿಸುವುದು.
- ಹಾಸಿಗೆಗೆ ತೆಳುವಾಗಿ ಸುಣ್ಣದ ಪುಡಿಯನ್ನು ಧೂಳೀಕರಿಸುವುದು.
- ಜ್ವರದಿಂದ ಶೇ. 90-95ರಷ್ಟು ಹುಳುಗಳು ಹೊರಬಂದ ನಂತರ ಹಾಸಿಗೆ ಸೋಂಕು ನಿವಾರಕ ಪುಡಿಯನ್ನು ಧೂಳೀಕರಿಸಬೇಕು.
- ಜ್ವರಕ್ಕೆ ಹೋಗದ ಹುಳುಗಳ ಸಂಖ್ಯೆ ಹೆಚ್ಚಾಗಿದ್ದು, ಆರೋಗ್ಯವಾಗಿದ್ದಲ್ಲಿ ಅವುಗಳನ್ನು ಆರಿಸಿ ಪ್ರತ್ಯೇಕವಾಗಿ ಸಾಕಣೆ ಮಾಡುವುದು.
- 4ನೇ ಜ್ವರದ ನಂತರ ಒಂದು ಬಾರಿ ಮತ್ತು 4ನೇ ಮತ್ತು 6ನೇ ದಿನದಂದು ಮತ್ತೊಮ್ಮೆ ಹಾಸಿಗೆ ಸೋಂಕು ನಿವಾರಕ ಪುಡಿಯನ್ನು ಧೂಳೀಕರಿಸುವುದು.